ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 8–6–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಸರ್ವ ಸಮಿತಿ ಸಭೆ<br>ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)<br>ಅಧ್ಯಕ್ಷತೆ:<br>ಕಿಮ್ಮನೆ ರತ್ನಾಕರ,<br>ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು.<br>ಆಶಯ ಭಾಷಣ:<br>ಡಾ. ಬರಗೂರು ರಾಮಚಂದ್ರಪ್ಪ,<br>ಅಧ್ಯಕ್ಷರು, ಪಠ್ಯಪುಸ್ತಕ ಪರಿಷ್ಕರಣ ಸಮಿತಿ | 09–06–2015<br>ಮಂಗಳವಾರ<br>ಬೆಳಿಗ್ಗೆ<br>10–30 ಗಂಟೆಗೆ | ಶಿಕ್ಷಕರ ಸದನ,<br>ಕೆಂಪೇಗೌಡ ರಸ್ತೆ,<br>ಬೆಂಗಳೂರು. |
| 2. | ಪತ್ರಿಕಾಗೋಷ್ಠಿ:<br>ನಾರಾಯಣ<br>ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಸಫಾಯಿ<br>ಕರ್ಮಚಾರಿಗಳ ಆಯೋಗ, ಬೆಂಗಳೂರು. | 09–06–2015<br>ಮಂಗಳವಾರ<br>ಮಧ್ಯಾಹ್ನ<br>1–00 ಗಂಟೆಗೆ | ಮುಖ್ಯ ಆಡಳಿತಾಧಿಕಾರಿಗಳ ಕಚೇರಿ,<br>ಬೆಂಗಳೂರು ನೀರು ಸರಬರಾಜು<br>ಮತ್ತು ಒಳಚರಂಡಿ ಮಂಡಳಿ,<br>ಕಾವೇರಿ ಭವನ, ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಅಭಿನಂದನೆ

**ಬೆಂಗಳೂರು, ಜೂನ್ 8 (ಕರ್ನಾಟಕ ವಾರ್ತೆ)**

ವಿಕಾಸ್ ಗೌಡ ಅವರು ಚೀನಾ ದೇಶದ ವುಹಾನ್‌ನಲ್ಲಿ ನಡೆದ 21 ನೇ ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನ ಪುರುಷರ ಡಿಸ್ಕಸ್ ಎಸೆತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿ ಚಿನ್ನದ ಪದಕವನ್ನು ಪಡೆದು ರಾಷ್ಟ್ರಕ್ಕೆ ಹಾಗೂ ರಾಜ್ಯಕ್ಕೆ ಕೀರ್ತಿಯನ್ನು ತಂದಿರುತ್ತಾರೆ.

ಇವರ ಹೆಮ್ಮೆಯ ಸಾಧನೆಗಾಗಿ ವಿಕಾಸ್ ಗೌಡ ಹಾಗೂ ಇವರ ಪೋಷಕರಿಗೆ ಈ ಸಂದರ್ಭದಲ್ಲಿ ಕ್ರೀಡಾ ಸಚಿವ ಕೆ. ಅಭಯಚಂದ್ರ ಜೈನ್, ಸರ್ಕಾರದ ಪ್ರಧಾನ ಕಾರ್ಯದರ್ಶಿ ಡಾ.

ಎನ್. ನಾಗಾಂಬಿಕಾ ದೇವಿ ಹಾಗೂ ಇಲಾಖೆಯ ನಿರ್ದೇಶಕರಾದ ಹೆಚ್. ಎಸ್. ವೆಂಕಟೇಶ್‌ರವರು ಇವರ ಸಾಧನೆಯನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದ್ದು, ಉನ್ನತ ಮಟ್ಟದ ಸಾಧನೆಗಾಗಿ ಆಶಿಸಿ ಶುಭ ಕೋರಿದ್ದಾರೆ.

ಬಾಬು:ಜಿಪಿಆರ್.

# ಮೈಸೂರು ಸಕ್ಕರೆ ಕಾರ್ಖಾನೆಗೆ ಅಭಿವೃದ್ಧಿಗೆ ನಿರ್ಣಯ

ಬೆಂಗಳೂರು, ಜೂನ್ 8(ಕರ್ನಾಟಕ ವಾರ್ತೆ)

ಮಂಡ್ಯದ ಮೈಸೂರು ಸಕ್ಕರೆ ಕಂಪನಿ ಕಾರ್ಖಾನೆಯ ಅಭಿವೃದ್ಧಿ ಬಗ್ಗೆ ಜಿಲ್ಲೆಯ ಶಾಸಕರು ಹಾಗೂ ಜನಪ್ರತಿನಿಧಿಗಳೊಂದಿಗೆ ಸಹಕಾರ ಹಾಗೂ ಸಕ್ಕರೆ ಸಚಿವ ಹೆಚ್.ಎಸ್. ಮಹದೇವ ಪ್ರಸಾದ್, ಅಧ್ಯಕ್ಷತೆಯಲ್ಲಿ ಹಾಗೂ ವಸತಿ ಸಚಿವರು ಎಂ. ಹೆಚ್. ಅಂಬರೀಷ್, ಇವರ ಉಪಸ್ಥಿತಿಯಲ್ಲಿ ಇತ್ತೀಚೆಗೆ ಬೆಂಗಳೂರಿನಲ್ಲಿ ಸಭೆ ನಡೆಸಲಾಯಿತು.

ಈ ಸಭೆಯಲ್ಲಿ ಮೈಶುಗರ್ ಕಾರ್ಖಾನೆಯ ಅಭಿವೃದ್ಧಿ ದೃಷ್ಟಿಯಿಂದ ಕಳೆದ ಎರಡು ವರ್ಷಗಳಲ್ಲಿ ಸರ್ಕಾರ ನೀಡಿದ ಅನುದಾನ ಮತ್ತು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳ ಕುರಿತು ಹಾಗೂ ಮುಂದಿನ ಸಾಲಿನಲ್ಲಿ ಕಬ್ಬು ನುರಿಸುವ ಕಾರ್ಯ ಪ್ರಾರಂಭಿಸುವುದೂ ಸೇರಿದಂತೆ, ಈಗಾಗಲೇ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಕಾಲಮಿತಿಯಲ್ಲಿ ಮುಗಿಸುವ ಬಗ್ಗೆ ಚರ್ಚಿಸಿದ್ದು, ಈ ಕೆಳಗಿನಂತೆ ಕೆಲವು ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಸೆಪ್ಟೆಂಬರ್ 15, 2015 ರಿಂದ ಪ್ರಸ್ತುತ ಸಾಲಿನ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸುವುದು.

ಅಲ್ಲಿಯವರೆಗೆ ಅರೆಯಲು ಸಿದ್ದವಿರುವ ಕಬ್ಬನ್ನು ಬೇರೆ ಕಾರ್ಖಾನೆಗಳಿಗೆ ಕಳುಹಿಸಲು ಶೀಘ್ರವಾಗಿ ತೀರ್ಮಾನಿಸುವುದು/ಕ್ರಮವಿಡುವುದು.

ಕಾರ್ಖಾನೆಯ ಕಬ್ಬು ಅಭಿವೃದ್ಧಿ ವಿಭಾಗವನ್ನು ಪುನರ್‌ಸಂಘಟಿಸಿ ರೈತ ಸ್ನೇಹಿಯಾಗಿ ಪರಿವರ್ತಿಸುವುದು.

ಇದೇ ವರ್ಷದಿಂದ ಕಬ್ಬಿನ ತಳಿ ಬದಲಾವಣೆಗೆ ಶ್ರೀ ವಿಶ್ವೇಶ್ವರಯ್ಯ ಕಬ್ಬು ಸಂಶೋಧನಾ ಸಂಸ್ಥೆ, ಮಂಡ್ಯ ಇವರು ಕೆಲಸ ಪ್ರಾರಂಭಿಸುವುದು.

ಬಿ.ಐ.ಎಫ್.ಆರ್. ನಿಂದ ಒಪ್ಪಿಗೆ ಪಡೆದು, ಬ್ಯಾಂಕುಗಳಿಂದ ಹೊಸ ಸಾಲ ಪಡೆದು ಮೈಸುಗರ್ ಕಂಪೆನಿಯಲ್ಲಿ ಅಗತ್ಯ ಕಾಮಗಾರಿಗಳನ್ನು ಪ್ರಾರಂಭ ಮಾಡುವುದು.

ಕಾರ್ಖಾನೆಯ ಎರಡೂ ಬಾಯ್ಲರ್‌ಗಳನ್ನು ದುರಸ್ಥಿ ಮಾಡಿಸುವುದು.

ಚೆಸ್ಕಾಂ (ಶ್ರೀ ಚಾಮುಂಡೇಶ್ವರಿ ವಿದ್ಯುತ್ ಕಂಪೆನಿ) ಜೊತೆ ವಿದ್ಯುತ್ ಖರೀದಿಗೆ ಸಂಬಂಧಿಸಿದಂತೆ ಒಡಂಬಡಿಕೆ ಮಾಡಿಕೊಳ್ಳುವುದು

ಅಗತ್ಯ ತಾಂತ್ರಿಕ ಸಿಬ್ಬಂದಿ ಹಾಗೂ ಅಧಿಕಾರಿಗಳನ್ನು ತುರ್ತಾಗಿ ನೇಮಕ ಮಾಡಿಕೊಳ್ಳುವುದು.

ಸಾಧ್ಯವಿರುವ ಕಡೆ ತಾಂತ್ರಿಕ ಸಿಬ್ಬಂದಿ ಮತ್ತು ಇತರೆ ಸಿಬ್ಬಂದಿಗಳನ್ನು ಸರ್ಕಾರದ ಇತರೆ ಇಲಾಖೆಗಳಿಂದ ನಿಯೋಜನೆ ಮಾಡಿಕೊಳ್ಳುವುದು.

ಕಾರ್ಖಾನೆಯ ಸಿಬ್ಬಂದಿಗಳಿಗೆ ಬಾಕಿ ಇರುವ ವೇತನವನ್ನು ಶೀಘ್ರವಾಗಿ ನೀಡುವುದು.

ಇಬ್ಬರು ಸ್ಥಳೀಯ ಪ್ರತಿನಿಧಿಗಳಿಗೆ ಕಂಪೆನಿಯ ಆಡಳಿತ ಮಂಡಳಿಯಲ್ಲಿ ಅವಕಾಶ ಕಲ್ಪಿಸುವುದು.

ಒಂದು ತಜ್ಞರ ಸಮಿತಿಯನ್ನು ನೇಮಿಸಿ, ಕಾರ್ಖಾನೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಗತ್ಯವಾಗಿ ಕೈಗೊಳ್ಳಬೇಕಾದ ಸಮಯಬದ್ಧ ಕಾರ್ಯಕ್ರಮಗಳ ಬಗ್ಗೆ ವರದಿ ಪಡೆಯುವುದು.

ಬೆಂಗಳೂರಿನಲ್ಲಿರುವ ಮೈಷುಗರ್ ಕಂಪೆನಿಯ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯನ್ನು ಮೈಷುಗರ್ ಕಂಪೆನಿ, ಮಂಡ್ಯ, ಇಲ್ಲಿಗೆ ಸ್ಥಳಾಂತರಿಸಿವುದು.

ಆಡಳಿತದಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ತರುವ ನಿಟ್ಟಿನಲ್ಲಿ ಕಾರ್ಖಾನೆಯ ಮತ್ತು ಕಚೇರಿಯ ಆವರಣದಲ್ಲಿ ಸಿ.ಸಿ. ಕ್ಯಾಮೆರಾ ಅಳವಡಿಸುವುದು

ಸಿಬ್ಬಂದಿಗಳಲ್ಲಿ ಶಿಸ್ತು ಮತ್ತು ಒಗ್ಗಟ್ಟನ್ನು ಮೂಡಿಸುವ ನಿಟ್ಟಿನಲ್ಲಿ ಕಾರ್ಖಾನೆಯ ಸಿಬ್ಬಂದಿಯವರಿಗೆ ಕಡ್ಡಾಯ ಸಮವಸ್ತ್ರ ಜಾರಿಗೆ ತರುವುದು.

ಬಾಬು/ಕೆಎಂ

## ಕರ್ನಾಟಕ ಕೃಷಿ ಬೆಲೆ ಆಯೋಗದಲ್ಲಿ  ಒಪ್ಪಂದದ ಮೇರೆಗೆ ಸಿಬ್ಬಂದಿ ನೇಮಕಾತಿ

ಬೆಂಗಳೂರು, ಜೂನ್ 8(ಕರ್ನಾಟಕ ವಾರ್ತೆ)

ಕರ್ನಾಟಕ ಕೃಷಿ ಬೆಲೆ ಆಯೋಗದಲ್ಲಿ ಒಪ್ಪಂದದ ಆಧಾರದ ಮೇಲೆ ಸಲಹೆಗಾರರು ಹಾಗೂ ತಾಂತ್ರಿಕ ಸಹಾಯಕ ಹುದ್ದೆಗೆ  ನೇಮಕಾತಿ ಮಾಡಿಕೊಳ್ಳಲು  ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ 15-06-2015 ರೊಳಗಾಗಿ ಸೀಲು ಮಾಡಿದ ಲಕೋಟೆಯಲ್ಲಿ ಮುದ್ದಾಂ/ನೋಂದಣಿ ಅಂಚೆ ಮೂಲಕ ಸಲ್ಲಿಸಿವುದು. ಈ ಪ್ರಕಟಣೆಯಲ್ಲಿರುವ ತಾಂತ್ರಿಕ ಸಹಾಯಕರ ಹುದ್ದೆಗಳಿಗೆ ಕ್ಷೇತ್ರಮಟ್ಟದಲ್ಲಿ ರಾಜ್ಯಾದ್ಯಾಂತ ಪ್ರವಾಸ ಕಾರ್ಯ ನಿರ್ವಹಿಸಬೇಕಾದ್ದರಿಂದ ಯುವಕ ಅಭ್ಯರ್ಥಿಗಳಿಗೆ ಪಾಶಸ್ತ್ಯ ನೀಡಲಾಗುವುದು ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗೆ ಕೃಷಿ ಇಲಾಖಾ Website http://raitamitra.kar.nic.in ನಲ್ಲಿ ಮಾಹಿತಿ ಪಡೆಯಬಹುದು. ಅರ್ಜಿಗಳನ್ನು Website ನಿಂದ Download ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ:15-06-2015 ರಂದು ಸಂಜೆ 5.00 ಗಂಟೆ ಒಳಗಾಗಿ ಕರ್ನಾಟಕ ಕೃಷಿ ಬೆಲೆ ಆಯೋಗದ ಕಛೇರಿ, ಕೃಷಿ ಇಲಾಖಾ ಆವರಣ, ಶೇಷಾದ್ರಿ ರಸ್ತೆ, ಬೆಂಗಳೂರು ರವರಿಗೆ ತಲುಪಿಸುವುದು. ಲಕೋಟೆ ಮೇಲೆ ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರನ್ನು ಕೆಂಪು ಶಾಯಿಯಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು.

ಸಂದರ್ಶನಕ್ಕೆ ಹಾಜರಾಗುವ ಸಮಯದಲ್ಲಿ ಅಭ್ಯರ್ಥಿಯು ಕರ್ನಾಟಕ ಕೃಷಿ ಬೆಲೆ ಆಯೋಗದ ಉದ್ದೇಶ ಮತ್ತು ಕರ್ತವ್ಯಗಳ ಮೇಲೆ ತಮ್ಮ ದೂರದೃಷ್ಠಿಕೋನದ ಬಗ್ಗೆ ತಮ್ಮ ಶೈಕ್ಷಣಿಕ ಗರಿಮೆ (Academic Competence) ಮತ್ತು ವಿಶ್ಲೇಷಣಾ ಸಮರ್ಥ್ಯವನ್ನು (Analytical Capacity) ಪಿ.ಪಿ.ಟಿ. ಪ್ರೆಸೆಂಟೇಷನ್ ಮುಖಾಂತರ ಪ್ರದರ್ಶಿಸತಕ್ಕದು.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಕೃಷಿ ಬೆಲೆ ಆಯೋಗದ ಕಛೇರಿಯನ್ನು (ದೂರವಾಣಿ ಸಂಖ್ಯೆ: 080–22074118) ಸಂಪರ್ಕಿಸುವುದು.

ಬಾಬು/ಕೆಎಂ

## ಕೃಷಿ ಯಂತ್ರೋಪಕರಣಗಳ ದರದ ಆಧಾರದ ಮೇಲೆ ಕೃಷಿ ಉಪಕರಣಗಳ ವಿತರಣೆ

ಬೆಂಗಳೂರು, ಜೂನ್ 8(ಕರ್ನಾಟಕ ವಾರ್ತೆ)

ಇತ್ತೀಚಿನ ದಿನಗಳಲ್ಲಿ ರೈತ ಕಾರ್ಮಿಕರು ದೊರೆಯುವುದು ತುಂಬ ದುರ್ಲಭವಾಗಿರುವುದರಿಂದ ಕೃಷಿ ಚಟುವಟಿಕೆಗಳನ್ನು ಸಕಾಲದಲ್ಲಿ ಕೈಗೊಳ್ಳಲು ಆಧುನಿಕ ಕೃಷಿ ಯಂತ್ರೋಪಕರಣಗಳನ್ನು ಬಳಸುವುದು ಅನಿವಾರ್ಯವಾಗಿದೆ. ಸಣ್ಣ, ಅತಿ ಸಣ್ಣ ಹಾಗು ಮಧ್ಯಮ ವರ್ಗದ ರೈತರು ಆರ್ಥಿಕವಾಗಿ ಸಬಲವಾಗಿಲ್ಲದಿರುವುದರಿಂದ ಆಧುನಿಕ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ಶಕ್ತರಿರುವುದಿಲ್ಲ. ಮುಂದುವರೆದು, ಹೆಚ್ಚು ಮೌಲ್ಯವುಳ್ಳ ಕೃಷಿ ಉಪಕರಣಗಳನ್ನು ಖರೀದಿಸಿದ್ದಲ್ಲಿ ಅವರ ಸ್ವಂತಕ್ಕೆ ಬಳಸುವುದರಿಂದ ಅದು ಒಬ್ಬ ರೈತನಿಗೆ ಮಾತ್ರ ಮೀಸಲಾಗಿರುತ್ತದೆ ಹಾಗು ಇಂತಹ ಉಪಕರಣಗಳನ್ನು ವರ್ಷದಲ್ಲಿ ಒಂದೆರಡು ಬಾರಿ ಉಪಯೋಗ ಮಾಡುವುದರಿಂದ ಉಳಿದ ಸಮಯದಲ್ಲಿ ಅವುಗಳು ಮೂಲೆಗುಂಪಾಗುವುದರೊಂದಿಗೆ ಅವುಗಳ ಪೂರ್ಣ ಸಾಮರ್ಥ್ಯವನ್ನು ಬಳಕೆ ಮಾಡಿಕೊಳ್ಳಲಾಗುವುದಿಲ್ಲ.

ಆದುದರಿಂದ, ಹೆಚ್ಚು ಮೌಲ್ಯವುಳ್ಳ ಕೃಷಿ ಯಂತ್ರೋಪಕರಣಗಳನ್ನು ನೊಂದಾಯಿತ ರೈತ ಗುಂಪುಗಳಿಗೆ/ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಗೆ ನೀಡುವುದರಿಂದ ಎಲ್ಲಾ ವರ್ಗದ ರೈತರು ಬಾಡಿಗೆ ರೂಪದಲ್ಲಿ ಸಕಾಲದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಪಡೆದುಕೊಂಡು ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಬಹುದಾಗಿರುತ್ತದೆ. ಇದರ ಜೊತೆಗೆ ಕೃಷಿ ಯಂತ್ರೋಪಕರಣಗಳ ಪರಿಪೂರ್ಣ ಸಾಮರ್ಥ್ಯವನ್ನು ಕೃಷಿಗೆ ಬಳಸಿಕೊಂಡು ಹೆಚ್ಚಿನ ಫಲಾನುಭವಿಗಳಿಗೆ ಇದರ ಉಪಯೋಗ ದೊರಕುವಂತೆ ಮಾಡಬಹುದಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೃಷಿ ಯಾಂತ್ರೀಕರಣ ಸಹಾಯಧನ ಕಾರ್ಯಕ್ರಮದಡಿ ಕೃಷಿ ಯಂತ್ರೋಪಕರಣಗಳ ದರದ ಆಧಾರದ ಮೇಲೆ ಕೃಷಿ ಉಪಕರಣಗಳನ್ನು ವಿತರಿಸಲು ಇಲಾಖೆಯು ಈ ಕೆಳಕಂಡಂತೆ ಕ್ರಮ ಕೈಗೊಂಡಿದೆ.

ಎರಡು ಲಕ್ಷದವರೆಗೆ ಇರುವ ಕೃಷಿ ಯಂತ್ರೋಪಕರಣಗಳನ್ನು ಪ್ರತಿ (Individual farmers) ರೈತ ಫಲಾನುಭವಿಗೆ ನೀಡುವುದು. ಸಾಮಾನ್ಯ ರೈತ ಫಲಾನುಭವಿಗೆ ಶೇ. 50 ರಷ್ಟು ಸಹಾಯಧನ ಹಾಗು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ರೈತರಿಗೆ ಶೇ. 90 ರಷ್ಟು ಸಹಾಯಧನ ನೀಡುವುದು. ಕೃಷಿ ಯಂತ್ರೋಪಕರಣಗಳ ದರವು 5 ಲಕ್ಷದವರೆಗೆ ಇದ್ದಲ್ಲಿ ಅಂತಹ ಉಪಕರಣಗಳನ್ನು ಕಾನೂನಿನ್ವಯ ನೊಂದಾಯಿತ ರೈತ ಗುಂಪುಗಳಿಗೆ (Farmers

producer organisations, Self help Groups and Farmer Clubs, Raitha Shakthi groups/ Registered farmer organizatrions) ಸಹಾಯಧನದ ಕಾರ್ಯಕ್ರಮದಡಿ ವಿತರಿಸುವುದು.

ಎಲ್ಲಾ ತರಹದ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಗೆ ಒದಗಿಸುವುದು. ಇದರಿಂದ ಎಲ್ಲಾ ವರ್ಗದ ರೈತರು ಅವಶ್ಯವಿರುವ ಉಪಕರಣಗಳನ್ನು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಲ್ಲಿ ಪಡೆಯಬಹುದು ಹಾಗು ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬಹುದಾಗಿದೆ.

ಬಾಬು/ಕೆಎಂ